## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | **335** |
| ಸದಸ್ಯರ ಹೆಸರು: | ಶ್ರೀ ಎನ್. ರವಿಕುಮಾರ್ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 19.08.2026 |
| ಉತ್ತರಿಸುವ ಸಚಿವರು: | ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ 2023 ರಿಂದ 2025ರವರಗೆ ಆಹಾರ ಮತ್ತು ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಿಂದ ಎಷ್ಟು ಆಹಾರ ಪದಾರ್ಥಗಳನ್ನು ಕಳಪೆ ಎಂದು ಪತ್ತೆ ಮಾಡಲಾಗಿದೆ: ಪತ್ತೆ ಮಾಡಿದ್ದರೆ: ಇದರ ಬಗ್ಗೆ ಕೈಗೊಂಡ ಕ್ರಮವೇನು; | ರಾಜ್ಯದಲ್ಲಿ 2023-2025ರವರೆಗೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಹಾರ ಸುರಕ್ಷತೆ ವಿಭಾಗದಿಂದ 54,856 ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿದ್ದು, ಅವುಗಳಲ್ಲಿ 423 ಆಹಾರ ಮಾದರಿಗಳು ಅಸುರಕ್ಷಿತ ಎಂದು 363 ಮಾದರಿಗಳು Substandard ಎಂದು ವರದಿಯಾಗಿರುತ್ತವೆ.<br><br>ಅಸುರಕ್ಷಿತ ಎಂದು ವರದಿಯಾದ 423 ಆಹಾರ ಮಾದರಿಗಳಲ್ಲಿ 236 ಪ್ರಕರಣಗಳನ್ನು JMFC ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ. ಇವುಗಳಲ್ಲಿ 18 ಪ್ರಕರಣಗಳು ಇತ್ಯರ್ಥವಾಗಿದ್ದು, ರೂ.5,40,000/-ದಂಡ ವಿಧಿಸಲಾಗಿರುತ್ತದೆ. 218 ಪ್ರಕರಣಗಳು ಮಾನ್ಯ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿರುತ್ತವೆ. ಉಳಿದ 187 ಮಾದರಿಗಳಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯಗಳಲ್ಲಿ ಮೊಕದ್ದಮೆಯನ್ನು ದಾಖಲಿಸುವ ಕಾನೂನು ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.<br><br>Substandard ಎಂದು ವರದಿಯಾದ 363 ಆಹಾರ ಮಾದರಿಗಳಲ್ಲಿ 313 ಪ್ರಕರಣಗಳನ್ನು ಅಪರ ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ. ಇವುಗಳಲ್ಲಿ 241ಪ್ರಕರಣಗಳು ಇತ್ಯರ್ಥವಾಗಿದ್ದು ರೂ.47,80,000/-ಗಳ ದಂಡವನ್ನು ವಿಧಿಸಲಾಗಿರುತ್ತದೆ. |

| | | |
|---|---|---|
| | | 72 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತವೆ. ಉಳಿದ 50 ಮಾದರಿಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ದಾಖಲಿಸುವ ಕಾನೂನು ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. |
| ಆ | ಅಕ್ರಮ ದಾಸ್ತಾನು, ಅಕ್ರಮ ಸಾಗಾಟ ಮತ್ತು ಅಕ್ಕಿಯ ಅಕ್ರಮ ಮಾರಾಟಗಳ ಕುರಿತು ಕಳೆದ 6 ತಿಂಗಳಿನಲ್ಲಿ ಬೆಂಗಳೂರಿನ 33 ಕ್ಕೂ ಹೆಚ್ಚು ಕಡೆಯಲ್ಲಿ ಲೋಕಾಯುಕ್ತ ದಾಳಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಅಕ್ರಮದಲ್ಲಿ ಭಾಗಿಯಾದ ಎಷ್ಟು ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿದೆ; ಅಮಾನತ್ತುಗೊಳಿಸದಿದ್ದಲ್ಲಿ, ಕಾರಣವೇನು; ಎಷ್ಟು ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿದೆ; ನಿರ್ದೇಶಕರ ಮೇಲೆ ಕೇಸು ದಾಖಲಿಸದಿರಲು ಕಾರಣವೇನು? (ವಿವರ ನೀಡುವುದು) | ಜೂನ್-2026ರ ಮಾಹೆಯಲ್ಲಿ ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಸಗಟು ಗೋದಾಮುಗಳ ಮೇಲೆ ಲೋಕಾಯುಕ್ತ ದಾಳಿ ಮಾಡಲಾಗಿರುತ್ತದೆ. ಸರ್ಕಾರದ ಕಾರ್ಯದರ್ಶಿ, ಇವರು ದಿನಾಂಕ:06.07.2026ರ ಸಭೆಯಲ್ಲಿ ಈ ಸಂಬಂಧ ಚರ್ಚಿಸಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ತಿಳಿಸಿ ಕರ್ತವ್ಯಲೋಪವೆಸಗಿರುವ ಅಧಿಕಾರಿ/ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸೂಚಿಸಿರುತ್ತಾರೆ.<br><br>ಅದರನ್ವಯ, ದಿನಾಂಕ:12.07.2026ರಂದು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ಯಶವಂತಪುರ ಗೋದಾಮಿನ ಅಕ್ರಮದಲ್ಲಿ ಭಾಗಿಯಾದ 02 ಸಗಟು ಮಳಿಗೆ ವ್ಯವಸ್ಥಾಪಕರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ. |

**ಇ-ಆನಾಸ 69 ಎಫ್‌ಪಿಪಿ 2026**

(ರಿಜ್ವಾನ್ ಅರ್ಷದ್)
ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು